ಗೋರಿಲ್ಲ: ಮಹಾಕಾಯದ ಮುಗ್ಧ ಕಾಡುಪ್ರಾಣಿ

ಗೋರಿಲ್ಲ ನಿಮ್ಮ ಮೇಲೆ ದಾಳಿ ಮಾಡಿದರೆ
ಏನು ಮಾಡಬೇಕು?
ಓಡಿ ಹೋಗಬೇಕೆ?
ಗಿಡ ಹತ್ತಬೇಕೆ?
ಸೊಟ್ಟು ಮಾರಿ ಮಾಡಬೇಕೆ?
ಇವುಗಳ ಉತ್ತರ ನಿಮ್ಮನ್ನು
ಅಚ್ಚರಿಪಡಿಸಬಹುದು!

ಗೋರಿಲ್ಲದ ಬಗೆಗಿನ ಎಲ್ಲ ಸಂಗತಿಗಳನ್ನು ಈ ಚಿಕ್ಕ ಪುಸ್ತಕ ನಿಮಗೆ ತಿಳಿಯುವ ಹಾಗೆ ಸರಳ ಭಾಷೆಯಲ್ಲಿ ಹೇಳುತ್ತದೆ!

ಗೋರಿಲ್ಲ: ಮಹಾಕಾಯದ ಮುಗ್ಧ ಕಾಡುಪ್ರಾಣಿ



ಜಾಯಸ್ ಮಿಲ್ಟನ್
ಚಿತ್ರ: ಬ್ರಾಯನ್ ಬರ್ನಾಡ್



ಗೋರಿಲ್ಲಃ ಮಹಾಕಾಯದ ಮುಗ್ಧ ಕಾಡುಪ್ರಾಣಿ

ಜಾಯಸ್ ಮಿಲ್ಟನ್

ಚಿತ್ರಃ ಬ್ರಾಯನ್ ಬರ್ನಾಡ್

ಕನ್ನಡಕ್ಕೆ ಪ್ರಭಾಕರ ನಾನಾವಟಿ



ಅಡವಿಯಲ್ಲಿ
ಕೆಲ ಕಾರ್ಮಿಕರು
ಗಿಡಗಳನ್ನು ಕಡಿಯುವದರಲ್ಲಿ
ನಿರತರಾಗಿದ್ದರು.

ಅಡವಿಯ ಹತ್ತಿರದ ಗುಡ್ಡದ ಮೇಲೆ
ಗೋರಿಲ್ಲದ ಕುಟುಂಬವೆಲ್ಲ
ಮಧ್ಯಾನ್ಹದ ನಿದ್ದೆಯಲ್ಲಿದ್ದದ್ದು
ಕಾರ್ಮಿಕರಿಗೆ ಗೊತ್ತಿರಲಿಲ್ಲ.





ಮಹಾಕಾಯದ ಗೋರಿಲ್ಲ ತನ್ನ ಒಂದು ಕಣ್ಣನ್ನು ತೆರೆದು ನೋಡುತ್ತದೆ. ಕಾರ್ಮಿಕರ ಒದರಾಟ ಕೇಳಿ ಅದು ಜಿಗಿದು ಎದೆ ಎದೆ ಬಡಿದುಕೊಳ್ಳುತ್ತ

ದೊಡ್ಡ ದನಿಯಲ್ಲಿ ಚೀರುತ್ತದೆ –

ರಾರಾರಾರಾSSS-ಹಾಹಾಹಾಹಾSSS.

ಆ ಚೀರಾಟ ಜಗತ್ತನ್ನೇ ನಡುಗಿಸುವ ಚೀರಾಟ.

‘ನನ್ನಿಂದ ದೂರವಿರಿ. ಇಲ್ಲದಿದ್ದರೆ ನಿಮ್ಮ ಪಾಡು....’ ಎಂದು ಹೇಳಬಯಸುತ್ತದೆ.

ಕಾರ್ಮಿಕರೆಲ್ಲ ತಮ್ಮ ಕೈಯಲ್ಲಿದ್ದ ಉಪಕರಣಗಳನ್ನು ಅಲ್ಲಿಯೇ ಒಗೆದು, ಜೀವ ಉಳಿಸಲು ದೂರ ದೂರ ಓಡಿ ಹೋಗುತ್ತಾರೆ.

ಗಂಡು ಗೋರಿಲ್ಲದ ತೂಕ 300
ಕೇಜಿಯಷ್ಟು ಇರಬಹುದು.
ಮನುಷ್ಯರ ತೂಕಕ್ಕಿಂತ 3 ಪಟ್ಟು.
ಗೋರಿಲ್ಲ ಬಹಳಷ್ಟು ಶಕ್ತಿ ಇರುವ ಪ್ರಾಣಿ.





ತನ್ನ ಹಲ್ಲುಗಳಿಂದ ಗಿಡದ ಟೊಂಗೆಯನ್ನು
ಮುರಿದು ಅದನ್ನು ತುಂಡು ತುಂಡು
ಮಾಡಬಹುದು. ಬಲಶಾಲಿ.
ಅದರ ಕೈಗಳು ಸಾಕಷ್ಟು ಉದ್ದ, ಅವುಗಳನ್ನು
ಚಾಚಿದರೆಅದು 2 ಮೀಟರಿನಷ್ಟು
ಹರಡಬಹುದು.


ಸಾಕಷ್ಟು ವರುಷಗಳಿಂದ ಜನರು ಗೋರಿಲ್ಲಕ್ಕೆ ಹೆದರುತ್ತಿದ್ದರು. ಅವುಗಳ ಬಗ್ಗೆ ಎಷ್ಟೋ ಕಟ್ಟುಕತೆಗಳಿದ್ದವು. ‘ಇವು ಭಯಂಕರ ಕಪಿಗಳು. ಯಾರಾದರೂ ಅವುಗಳ ಸಮೀಪ ಬಂದರೆ ಅವರ ಮೇಲೆ ದಾಳಿ ಮಾಡುವವು, ಗಾಯ ಗೊಳಿಸುವವು.




ಕೆಲ ವಿಜ್ಞಾನಿಗಳು ಈ ಕತೆಗಳು ನಿಜವನ್ನು ಹೇಳುತ್ತಿರಬಹುದೇ ಎಂದು ಅಚ್ಚರಿ ಪಡುತ್ತಿದ್ದರು.ಅವರು ಆಫ್ರಿಕೆಯ ಅರಣ್ಯಕ್ಕೆ ತಾವೇ ಹೋಗಿ ನೋಡಬೇಕು ಎಂದು ನಿರ್ಧರಿಸಿದರು.



ಮೊದಮೊದಲು ವಿಜ್ಞಾನಿಗಳು ಕೂಡ ಅಂಜುತ್ತಿದ್ದರು.ಆದರೆ ಅದನ್ನು ತೋರಿಸಿಗೊಡಬಾರದು ಎಂಬುದನ್ನು ಅವರು ಕಲಿತರು. ಹೀಗೇಕೆ?




ನೀವು ಗೋರಿಲ್ಲ ನೋಡಿ ಓಡಿದರೆ ಅದು ನಿಮ್ಮನ್ನು ಹಿಂಬಾಲಿಸಿ ಹಲ್ಲಿನಿಂದ ಕಡಿಯುವದು, ಉಗುರುಗಳಿಂದ ಗಾಯಗೊಳಿಸುವದು. ಆದರೆ ಅದರ ಈ ದಾಳಿ ಬರಿ ತೋರಿಕೆಗೆ. ನಿಮಗೆ ಗೋರಿಲ್ಲ ಕಂಡರೆ ನೀವು ಏನನ್ನೂ ಮಾಡದೆ ಸುಮ್ಮನೆ ನಿಂತು ನಾವು ನಿನಗೆ ಅಂಜುವದಿಲ್ಲ ಎಂದು ನಟಿಸಿದರೆ ಅದು ದಾಳಿ ಮಾಡದೆ ತನ್ನಷ್ಟಕ್ಕೆ ತಾನೇ ತೆಪ್ಪಗೆ ನಿಮ್ಮ ಬದಿಯಿಂದ ಹೋಗುವದು.



ಗೋರಿಲ್ಲದ ಅಭ್ಯಾಸ ಮಾಡಿದ
ಮೊದಲನೆ ವಿಜ್ಞಾನಿಯ ಹೆಸರು,
ಡಿಯಾನ್ ಫೊಸ್ಸಿ. ಗೋರಿಲ್ಲಗಳಲ್ಲಿ
ತನ್ನ ಬಗ್ಗೆ ನಂಬಿಕೆ ಹುಟ್ಟಿಸಲು
ಅವಳು ಗೋರಿಲ್ಲಗಳಂತೆ ನಟಿಸಿದಳು.
ಮೈ-ಕೈ ತುರಿಸಿಕೊಂಡಳು, ಚೀರಿದಳು,
ಎದೆ ಎದೆ ಬಡಿದುಕೊಂಡಳು, ಗಿಡದ
ಎಲೆಗಳನ್ನು ಕೂಡ ತಿಂದಳು.



ಒಮ್ಮೆ ಗೋರಿಲ್ಲ ಅವಳ ಮೇಲೆ ದಾಳಿ
ಮಾಡಿದಾಗ, ಡಿಯಾನ್ ತನ್ನ ಹಲ್ಲು
ಕಿಸಿದಳು, ಸೊಟ್ಟು ಮಾರಿ ಮಾಡಿದಳು.
ಗೋರಿಲ್ಲ ಅಚ್ಚರಿಪಟ್ಟಿತು.ಅದು ತನ್ನ
ದಾಳಿ ನಿಲ್ಲಿಸಿ ತೆಪ್ಪನೆ ಕುಳಿತು ಬಿಟ್ಟಿತು.




ಕೆಲ ದಿನಗಳಲ್ಲಿಯೇ ಗೋರಿಲ್ಲದ ತಂಡಕ್ಕೆ ಡಿಯಾನ್ ಪರಿಚಯ-ದವಳಾದಳು.ಒಂದು ಗಂಡು ಗೋರಿಲ್ಲ ಮರಿಗೆ– ಅದಕ್ಕೆ ಅವಳು ಪೀನಟ್ ಎಂದು ಹೆಸರಿಟ್ಟಿದ್ದಳು –ಅವಳ ಬಗ್ಗೆ ಬಹು ಕುತೂಹಲ. ಅದು ಅವಳ ಸಮೀಪಕ್ಕೆ ಬರುತ್ತಿತ್ತು. ಡಿಯಾನ್ ಕೈ ಚಾಚಿ ಸುಮ್ಮನೆ ನಿಂತಳು.

ನಿದಾನವಾಗಿ ಬಂದು ಪೀನಟ್ ಅವಳ ಬೆರಳುಗಳನ್ನು ಮುಟ್ಟತೊಡಗಿತು. ಡಿಯಾನ್ ಗೆ ಅಚ್ಚರಿ. ಡಿಯಾನ್ ಗೋರಿಲ್ಲದ ಜತೆ ಗೆಳೆತನ ಮಾಡಿದ ಮೊದಲನೆಯ ವಿಜ್ಞಾನಿ. ಇಂತಹ ಹಿಂಸ್ರ ಗೋರಿಲ್ಲ ಮುಟ್ಟುವ ಮೊದಲನೆ ಮನುಷ್ಯಳು.



ಸಮೀಪದಿಂದ ಗೋರಿಲ್ಲಗಳ ನಿರೀಕ್ಷಣೆ ಮಾಡಿದ್ದರಿಂದ ಡಿಯಾನ್ ಮತ್ತು ಅವಳ ಸಂಗಡಿಗರಿಗೆ ಗೋರಿಲ್ಲ ನಿಜವಾಗಿ ಹೇಗೆ ಜೀವಿಸುತ್ತವೆ ಎಂಬ ಸಂಗತಿ ತಿಳಿಯಿತು.



ಗೋರಿಲ್ಲ ಅಡವಿಯಲ್ಲಿರುವ ಬಹು ಸಾಧು ಪ್ರಾಣಿಗಳು. ಅವು ತಮ್ಮ ಗುಂಪು ಮಾಡಿಕೊಂಡು ಶಾಂತವಾದ ಜೀವನ ಕಳೆಯುತ್ತವೆ. ಹಿರಿಯ ಗಂಡು ಗೋರಿಲ್ಲ ಆ ಗುಂಪಿನ ಮುಂದಾಳು. ವಿಜ್ಞಾನಿಗಳೆಲ್ಲ ಅದನ್ನು ಸಿಲ್ವರಬ್ಯಾಕ್ ಎಂದು ಗುರುತಿಸುತ್ತಿದ್ದರು. ಅದರ ನರೆತ ಬಿಳಿಯ ಕೂದಲುಗಳು ಕೊರಳು ಮತ್ತು ಬೆನ್ನಿನ ತುಂಬ ಹರಡಿದ್ದರಿಂದ ಈ ಹೆಸರು.

ತರುಣ ಗಂಡು ಗೋರಿಲ್ಲಗಳನ್ನು
ಬ್ಲ್ಯಾಕಬ್ಯಾಕ್ ಎಂದು ಅಭ್ಯಸಿಸುವ
ವಿಜ್ಞಾನಿಗಳ ತಂಡ ಕರೆಯುತ್ತಿತ್ತು.



ಬ್ಲ್ಯಾಕಬ್ಯಾಕ್ 9-10 ವರುಷದ್ದಿದಾಗಲೇ
ಇದ್ದಾಗಲೇ ಅದರ ಮೈಮೇಲಿನ
ಕೂದಲುಗಳು ನರೆತು ಬಿಳಿಯಾದವು.
ಕೆಲ ದಿನಗಳಲ್ಲಿಯೇ ಈ ತರುಣ ಗಂಡು
ಗೋರಿಲ್ಲಗಳು ಕೂಡ ಸಿಲ್ವರಬ್ಯಾಕ್
ಆಗುವವು. ಆಗ ಬೇಕಿದ್ದರೆ ಗುಂಪಿನಲ್ಲಿ
ಇರಬಹುದು ಇಲ್ಲದಿದ್ದರೆ ತನಗೆ ಎಲ್ಲಿ
ಬೇಕೋ ಅಲ್ಲಿ ಹೋಗಬಹುದು.



ಹೆಣ್ಣು ಗೋರಿಲ್ಲಗಳು ಗಂಡು ಗೋರಿಲ್ಲಕ್ಕಿಂತ ಅರ್ಧದಷ್ಟು ತೂಕ ಮತ್ತು ಗಾತ್ರಗಳಿದ್ದ ಪ್ರಾಣಿಗಳು. ತಮ್ಮ ವೇಳೆಯನ್ನೆಲ್ಲ ತಮ್ಮ ಮರಿಗಳ ಆರೈಕೆಯಲ್ಲಿ, ಅವುಗಳನ್ನು ದೊಡ್ಡದು ಮಾಡುವದರಲ್ಲಿ ಕಳೆಯುತ್ತವೆ. ಗೋರಿಲ್ಲ ಹುಟ್ಟಿದಾಗ ಅದರ ತೂಕ 3-4 ಕೇಜಿ. ಅದರ ತ್ವಚೆ ನಯವಾದದ್ದು. ಹುಟ್ಟಿದಾಗ ಅದರ ಮೇಮೇಲೆ ಕೂದಲು ಇರುವದಿಲ್ಲ.





ಗೋರಿಲ್ಲದ ಗುಂಪು ಸ್ಥಳದಿಂದ ಸ್ಥಳಗಳಿಗೆ ಅಲೆಯುವಾಗ ಹೆಣ್ಣು ಗೋರಿಲ್ಲ ತನ್ನ ಮರಿಯನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತದೆ.


ಆ ಮರಿಯು ತನ್ನ ತಾಯಿಯ
ಮೊಲೆ ಹಾಲು ಕುಡಿದು
ಬೆಳೆಯುತ್ತದೆ ಮತ್ತು
ಶಕ್ತಿಯುಳ್ಳದ್ದಾಗುತ್ತದೆ.
ಅದು ಎರಡು ತಿಂಗಳಾದ ಕೂಡಲೆ
ತಾಯಿಯ ಬೆನ್ನಿನ ಮೇಲೆ ಕುಳಿತು
ಹೋಗಲು ಅಣಿಯಾಗುತ್ತದೆ.



ಅದು ತಾಯಿಯ ಕೂದಲುಗಳನ್ನು
ಗಟ್ಟಿಯಾಗಿ ಹಿಡಿದು ಬೆನ್ನಿನ ಮೇಲೆ
ಕೂಡುವದು. ಕೆಲ ಸಲ ಗಟ್ಟಿಯಾಗಿ
ಹಿಡಿಯಲು ಅಸಾಧ್ಯ ವಾದಾಗ ಕೈ
ಸಡಿಲಾಗಿ ಕೆಳಗೆ ಬಿದ್ದು ಬಿಡುವದು -
ಧೊಪ್ಪ...



ಸಿಲ್ವರಬ್ಯಾಕ್ ದ ಮುಂದಾಳುತನದಲ್ಲಿ
ಈ ಗುಂಪು ಮುಂಜಾವಿನ ತಿಂಡಿಗಾಗಿ
ಅಡವಿಯನ್ನು ಸುತ್ತುಹಾಕುತ್ತಿದೆ.
ಅವು ತಮ್ಮ ನಾಲ್ಕು ಕಾಲುಗಳ ಮೇಲೆ
ನಡೆಯುತ್ತ ಸಾಲಾಗಿ ಹೋಗುತ್ತವೆ.
ತಮ್ಮ ಭಾರವನ್ನೆಲ್ಲ ಕಾಲಿನ
ಬೆರಳುಗಳ ಮೇಲೆ ಹಾಕುತ್ತವೆ. ಅವು
ಕೇವಲ ತಮ್ಮ ಹಿಂಗಾಲುಗಳನ್ನು-
ಪಯೋಗಿಸಿ ಕೂಡ ನಡೆಯಬಹುದು.
ಆದರೆ ಕೆಲ ಹೆಜ್ಜೆ ಮಾತ್ರ.



ಗೋರಿಲ್ಲಗಳಿಗೆ ಅಡವಿಯಲ್ಲಿಯ ಹಣ್ಣುಗಳ ಗಿಡಗಳು ಕಾಣುತ್ತವೆ. ರುಚಿಯಾದ ತಾಜಾ ಹಣ್ಣುಗಳು.

ಮುಂಜಾವಿನ ಈ ತಿಂಡಿ ಕಾರ್ಯಕ್ರಮ ಎರಡು-ಮೂರು ಗಂಟೆ ನಡೆಯುವದು. ಆಮೇಲೆ ಒಂದು ಜೊಂಪು ನಿದ್ದೆಯ ಸಮಯ.




ಮಧ್ಯಾನ್ಹದಲ್ಲಿ ಅವು ಹೊಟ್ಟೆ ತುಂಬುವಷ್ಟು ಆಹಾರವನ್ನು ಸೇವಿಸುವವು. ಹಾಗೆ ನೋಡಿದರೆ ಅವು ದಿನವಿಡಿ ಏನಾದರೂ ತಿನ್ನುತ್ತಲೇ ಇರುತ್ತವೆ.

ಅವುಗಳಿಗೆ ಕಾಡಿನಲ್ಲಿಯ ಹಣ್ಣು-ಹಂಪಲಗಳು ಸೇರುತ್ತವೆ. ಬಿದಿರಿನ ಗರ, ಗಿಡಗಳ ಮೃದುವಾದ ತೊಗಟೆ, ತರುಚಿ ಗಿಡ ಇವು ಅವುಗಳಿಗೆ ಸೇರುವ ಆಹಾರ ಪದಾರ್ಥಗಳು.







ಅಲ್ಲಿಯೇ ಇದ್ದ ಕಪ್ಪೆ ಮರಿ ಅದರ ಮೂಗಿನ ಮೇಲೆ ಕೂಡಲು ಪ್ರಯತ್ನಿಸುತ್ತಿರುತ್ತದೆ. ಅದನ್ನು ಓಡಿಸುವದೇ ಅದಕ್ಕೆ ಆಟ.



ಮಧ್ಯಾನ್ಹದಲ್ಲಿ ಮತ್ತೇ ಇನ್ನೊಂದು ಜೊಂಪು ನಿದ್ದೆ. ಎಲ್ಲ ಗೋರಿಲ್ಲಗಳು ಮಲಗುತ್ತವೆ. ಆದರೆ ಒಂದು ಮರಿಗೆ ಇದು ಚೆಲ್ಲಾಟದ ಸಮಯ. ತಲೆಯ ಮೇಲೆ ಗಿಡದ ಎಲೆಯನ್ನಿಟ್ಟು ಆಟವಾಡುತ್ತದೆ.

ಸಮೀಪದ ಒಂದು ಗಿಡದ
ಮೇಲಿನ ಹಸಿದಿದ್ದ ಚಿರತೆಯು
ಇದನ್ನೆಲ್ಲ ನೋಡುತ್ತಲಿದೆ.
ಗೋರಿಲ್ಲದ ಮರಿಯು ಚಿರತೆಗೆ
ಒಂದು ಔತಣದ ಊಟ.






ಒಮ್ಮೆಲೆ ಸಿಲ್ವರಬ್ಯಾಕ್ ನಿಗೆ
ಎಚ್ಚರವಾಯಿತು. ಅದಕ್ಕೆ
ಚಿರತೆಯ ವಾಸನೆ
ಬಂದಿತು.ಅದು ಚೀರತೊಡಗಿತು-
ಹೋSS...ಹೋSS...ಹೋSS...




ಅದು ಗಿಡದ ಎಲೆಯನ್ನು ಕಿತ್ತಿ ತನ್ನ
ತುಟಿಗಳ ನಡುವೆ ಹಿಡಿಯುತ್ತದೆ. ಹೀಗೆ
ಗೋರಿಲ್ಲ ಹಿಡಿದಾಗ ಎಚ್ಚರಿಕೆ!
ಅದಕ್ಕೆ ಸಿಟ್ಟು ಬಂದಿದ್ದರ ಗುರುತಿದು!

ಪೋಕ್!ಪೋಕ್! ಪೋಕ್!ಪೋಕ್!
ಸಿಲ್ವರಬ್ಯಾಕ್ ತನ್ನ ಎದೆ
ಬಡಿದುಕೊಳ್ಳುತ್ತಲಿದೆ.ಕೈಯ
ಮುಷ್ಟಿಯಿಂದ ಹುಲ್ಲನ್ನು ಕಿತ್ತಿ
ಹವೆಯಲ್ಲಿ ಒಗೆಯುತ್ತದೆ.
ನಾಲ್ಕು ಕಾಲುಗಳನ್ನೂರಿ
ಸುತ್ತಮುತ್ತ ಎಲ್ಲ ದಿಕ್ಕಿಗೆ ಓಡುತ್ತದೆ.
ಹೀಗೇಕೆ ಮಾಡುತ್ತದೆ?
ಅದು ಒಂದು ರೀತಿಯ ಅದರ ಶಕ್ತಿ
ಪ್ರದರ್ಶನೆ!
ಸಿಲ್ವರಬ್ಯಾಕ್ ತನ್ನ
ಜೀವವಿರುವವರೆಗೂ ತನ್ನ
ಗುಂಪನ್ನು ರಕ್ಷಿಸುತ್ತದೆ.



ಸಿಲ್ವರಬ್ಯಾಕ್ ಸಿಟ್ಟಿನಲ್ಲಿದ್ದಾಗ
ಚಿರತೆ ಕೂಡ ದಾಳಿ
ಮಾಡಲಾರದು.


ದೊಡ್ಡ ಬೆಕ್ಕು ಕಣ್ಣು ತಪ್ಪಿಸಿ
ಅಡವಿಯಲ್ಲಿ ಮರೆಯಾಗುತ್ತದೆ.



ಸಂಜೆಯಾಗುವ ಮೊದಲು
ಸಿಲ್ವರಬ್ಯಾಕ್ ಗಿಡಗಂಟಿಗಳ
ಟೊಂಗೆಗಳನ್ನು ಮುರಿದು ತುಂಡು
ಮಾಡಿ ಅವುಗಳನ್ನು ಕಲೆ ಹಾಕಿ
ಒಂದು ರೀತಿಯ ಗೂಡನ್ನು
ಕಟ್ಟುತ್ತದೆ.




ಎಲ್ಲ ಗೋರಿಲ್ಲಗಳು ಪ್ರತಿ ರಾತ್ರಿ
ಗೂಡಿನಲ್ಲಿ ಮಲಗುತ್ತವೆ. ತರುಣ
ಗೋರಿಲ್ಲಗಳು ಗಿಡಗಳ
ಟೊಂಗೆಗಳ ಮೇಲೆ ಗೂಡು
ಕಟ್ಟುತ್ತವೆ. ವಯಸ್ಸಾದ
ಗೋರಿಲ್ಲಗಳಿಗೆ ಗಿಡ ಹತ್ತಲು
ಕಷ್ಟ. ಆದ್ದರಿಂದ ಅವು ನೆಲದ
ಮೇಲೆ ಗೂಡು ಕಟ್ಟಿ
ಮಲಗುತ್ತವೆ.
ತಾಯಿ ಗೋರಿಲ್ಲಗಳು ತಮ್ಮ
ಮರಿಗಳನ್ನು ಅಪ್ಪಿಕೊಂಡು
ಮಲಗುತ್ತವೆ.



ಗೋರಿಲ್ಲಗಳಲ್ಲಿ ಜಾಣತನವಿದೆಯೇ?
ಎಷ್ಟೋ ಕಾಲ ವಿಜ್ಞಾನಿಗಳಿಗೆ
ಜಾಣತನವಿಲ್ಲ ಎಂದು ಅನ್ನಿಸುತ್ತಿತ್ತು.
ಕೋಕೊ ಎಂಬ ಗೋರಿಲ್ಲ ವಿಜ್ಞಾನಿಗಳ
ಈ ತಪ್ಪು ತಿಳುವಳಿಕೆಯನ್ನು ದೂರ
ಮಾಡುತ್ತಲಿದೆ.
ಕೋಕೊ ಚಿಕ್ಕ ಮರಿ ಇದ್ದಾಗ ಪೆನ್ನಿ
ಪ್ಯಾಟರ್ಸನ್ ಎಂಬ ವಿಜ್ಞಾನಿಯು ಆ
ಗೋರಿಲ್ಲಳ ಶಿಕ್ಷಿಕೆಯಾದಳು.
ಪೆನ್ನಿಯು ಕೋಕೊಳಿಗೆ ಕಿವುಡರು
ಉಪಯೋಗಿಸುವಂತಹ ಸಂಕೇತ
ಭಾಷೆಯನ್ನು ಕಲಿಸಿದಳು.
ಕೋಕೊ ಎರಡು ಸಾವಿರ ಶಬ್ದಗಳನ್ನು
ಕಲಿಯಿತು.ಅದು ಹೊಸ ಶಬ್ದಗಳ ರಚನೆ
ಮಾಡಲು ಕೂಡ ಕಲಿಯಿತು.
ಕೋಕೊ ಬ್ರೋಕೋಲಿ ಪಲ್ಲೆಗೆ
ವಾಸನೆಯ ಪಲ್ಲೆ ಎಂದು
ಕರೆಯಿತು.ಮುಖವಾಡಕ್ಕೆ ಕಣ್ಣಿನ ಹ್ಯಾಟು
ಎಂದು ಕರೆಯಿತು.



ಚಿಕ್ಕ ಮಕ್ಕಳು ಮಾಡುವದನ್ನೆಲ್ಲ ಕೋಕೊ ಮಾಡುತ್ತಲಿತ್ತು. ಚಿತ್ರಗಳಿರುವ ಪುಸ್ತಕಗಳನ್ನು ಅದು ನೋಡುತ್ತಿತ್ತು. ಹೂವು, ನಾಯಿಗಳ ಜತೆ ಆಡುವದು ಅದಕ್ಕೆ ಸೇರುತ್ತಿತ್ತು. ಅದಕ್ಕೆ ಸ್ವಲ್ಪ ಓದಲು ಕೂಡ ಬರತೊಡಗಿತು.



ಇದೆಲ್ಲ ಬರುತ್ತಿದ್ದರೂ ಅದಕ್ಕೆ ಒಂದು ಕೆಲಸ ಬರಲಿಲ್ಲ-ಮಾತನ್ನಾಡಲು ಬರಲಿಲ್ಲ. ಆದ್ದರಿಂದ ಪೆನ್ನಿ ಅದಕ್ಕೆ ಮಾತನ್ನಾಡುವ ಒಂದು ಸಂಗಣಕವನ್ನು ಕೊಟ್ಟಳು. ಕೋಕೊ ಈ ಸಂಗಣಕವನ್ನುಪಯೋಗಿಸಿ ಹೇಗೆ ಮಾತಾಡುವದು, ಹೇಗೆ ವಿಚಾರ ಮಾಡುವದು, ಏನನ್ನು ಕಲಿಯುವದು ಎಂಬುದನ್ನು ವಿಜ್ಞಾನಿಗಳು ನೀರಿಕ್ಷಿಸಬಹುದು.



ಕೋಕೊ ಸಂಗಣಕದ ಜತೆ

ಈ ಕಾಡು ಗೋರಿಲ್ಲಗಳ ಭವಿಷ್ಯ
ಹೇಗಿದೆ ಎಂಬುದು ಯಾರಿಗೂ
ತಿಳಿಯದ ವಿಷಯ. ಗೋರಿಲ್ಲಗಳು
ವಾಸಿಸುವ ಆಫ್ರಿಕೆಯ ದೇಶಗಳು
ಈಗಲೇ ಜನನಿಬಿಡ ದೇಶಗಳಾಗಿವೆ.
ಜನರಿಗೆ ಜೀವಿಸಲು, ಊಳಲು ಭೂಮಿ
ಬೇಕು.

ಗೋರಿಲ್ಲಗಳು ವಾಸಿಸುತ್ತಿರುವ
ಅಡವಿಗಳನ್ನು ಅವರು ನಷ್ಟ
ಮಾಡುತ್ತಲಿದ್ದಾರೆ.
ಎಷ್ಟೋ ಆಫ್ರಿಕನ್ ರಿಗೆ
ಗೋರಿಲ್ಲಗಳನ್ನು ಉಳಿಸಬೇಕಾಗಿದೆ.
ಆದರೆ ಅವರಿಗೆ ಸಹಾಯ ಬೇಕು.





300ಕ್ಕಿಂತ ಹೆಚ್ಚು ಗೋರಿಲ್ಲ-
ಗಳು ಅಮೇರಿಕೆಯ ಪ್ರಾಣಿ-
ಸಂಗ್ರಹಾಲಯಗಳಲ್ಲಿವೆ.
ಕಾಡು ಗೋರಿಲ್ಲಗಳಂತೆ ಅವು
ಮರಿಗಳಿಗೆ ಜನ್ಮ ಕೊಡುತ್ತವೆ.

ಓಮಾನಿ ನ್ಯೂಯಾರ್ಕ ನಗರದ
ಮೃಗಾಲಯದಲ್ಲಿ ಹುಟ್ಟಿದ ಗೋರಿಲ್ಲ.
ಅದರ ತಾಯಿ ಕೂಡ ಅಲ್ಲಿಯೇ
ಹುಟ್ಟಿದಳು.
ಓಮಾನಿಯ ಮಕ್ಕಳು, ಮೊಮ್ಮಕ್ಕಳು
ಮೃಗಾಲಯದಲ್ಲಿ ಹುಟ್ಟಿ ಬೆಳೆ-
ಯುವವೇ?
ಬಹುಷಃ ಇಲ್ಲ.



ಓಮಾನಿಗೆ 21 ತಿಂಗಳು ವಯಸ್ಸು ಆದಾಗ



ಮುಂದೆ ಎಂದಾದರೂ
ಅವುಗಳನ್ನು ಅಡವಿಗಳು
ಉಳಿಸುವವು.